

بِسْمِ اللهِ الرَّحْمَنِ الرَّحِيم

# ರಮಝಾನ್ ತಿಂಗಳ ಕೊನೆಯ ಜುಮುಅ ಮಾತ್ರವಲ್ಲ ಪ್ರತಿಯೊಂದು ಜುಮುಅಗಳೂ ಸತ್ಯವಿಶ್ವಾಸಿಗೆ ಮಹತ್ವಪೂರ್ಣವಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **01–07–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَاأَيُّهَا الَّذِينَ آمَنُوا إِذَا نُودِي لِلصَّلَاةِ مِنْ يَوْمِ الْجُمُعَةِ فَاسْعَوْا إِلَى ذِكْرِ اللهِ وَذَرُوا الْبَيْعَ ذَلِكُمْ خَيْرٌ لَكُمْ إِنْ كُنتُمْ تَعْلَمُونَ ۝
فَإِذَا قُضِيَتْ الصَّلَاةُ فَانتَشِرُوا فِي الأَرْضِ وَابْتَغُوا مِنْ فَضْلِ اللهِ وَاذْكُرُوا اللهَ كَثِيرًا لَعَلَّكُمْ تُفْلِحُونَ ۝
وَإِذَا رَأَوْا تِجَارَةً أَوْ لَهْوًا انفَضُّوا إِلَيْهَا وَتَرَكُوكَ قَائِمًا قُلْ مَا عِنْدَ اللهِ خَيْرٌ مِنْ اللَّهْوِ وَمِنْ التِّجَارَةِ وَاللهُ خَيْرُ الرَّازِقِينَ ۝

ಓ ಸತ್ಯವಿಶ್ವಾಸಿಗಳೇ, ಶುಕ್ರವಾರ ದಿನದಂದು ನಿಮ್ಮನ್ನು ಪ್ರಾರ್ಥನೆಗೆ ಕರೆಯಲಾದರೆ ಅಲ್ಲಾಹನನ್ನು ಸ್ಮರಿಸಲಿಕ್ಕೋಸ್ಕರ ನೀವು ತ್ವರಿತವಾಗಿ ಹೋಗಿರಿ. ನಿಮ್ಮ ವ್ಯಾಪಾರ ವ್ಯವಹಾರಗಳನ್ನೆಲ್ಲ ನಿಲ್ಲಿಸಿರಿ. ನೀವು ಮನವರಿಕೆ ಮಾಡಿದರೆ ಅದೇ ನಿಮಗೆ ಉತ್ತಮವಾದುದಾಗಿದೆ. ಪ್ರಾರ್ಥನೆ ಮುಗಿದ ಬಳಿಕ ನೀವು ಭೂಮಿಯಲ್ಲಿ ಚದುರಿ ಹೋಗಿ ಅಲ್ಲಾಹನ ಅನುಗ್ರಹವನ್ನು ಅರಸಿರಿ. ನೀವು ಯಶಸ್ಸುಗಳಿಸಲಿಕ್ಕೋಸ್ಕರ ಅಲ್ಲಾಹನ ಸ್ಮರಣೆಯನ್ನು ಹೆಚ್ಚಾಗಿ ಮಾಡಿರಿ. ಯಾವುದಾದರೂ ವ್ಯಾಪಾರವನ್ನಾಗಲಿ ವಿನೋದವನ್ನಾಗಲಿ ಕಂಡರೆ ಅವರು (ಕಪಟ ವಿಶ್ವಾಸಿಗಳು) ಅದರೆಡೆಗೆ ಸೆಳೆಯಲ್ಪಟ್ಟು ನಿನ್ನನ್ನು (ಪ್ರವಚನಕ್ಕೆ) ನಿಂತ ಸ್ಥಿತಿಯಲ್ಲೇ ಬಿಟ್ಟು ಹೋಗುವರು. ಹೇಳು: ವಿನೋದ ಮತ್ತು ವ್ಯಾಪಾರಕ್ಕಿಂತ ಅಲ್ಲಾಹನ ಬಳಿಯಲ್ಲಿರುವುದು ಉತ್ತಮವಾದುದಾಗಿದೆ. ಅನ್ನದಾತರಲ್ಲಿ ಅಲ್ಲಾಹನು ಅತ್ಯುತ್ತಮನಾಗಿದ್ದಾನೆ. (ಪವಿತ್ರ ಖುರ್‌ಆನ್ 62:10–12).

ಅಲ್ಲಾಹನು ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸುವ ಬಗ್ಗೆ ಆಜ್ಞೆ ನೀಡಿದಾಗ **ಅಯ್ಯಾಮನ್ ಮಅದೂದಾತ್** ಎಣಿಕೆಯ ಕೆಲವು ದಿನಗಳು ಎಂದು ಹೇಳಿದ್ದಾನೆ. ರಮಝಾನ್ ಪ್ರಾರಂಭವಾದಾಗ ನಮ್ಮ ಪೈಕಿ ಹೆಚ್ಚಿನವರು ಯೋಚಿಸಿರಬಹುದು, ಬೇಸಗೆ ಕಾಲದಲ್ಲಿ ಹಗಲು ಹೊತ್ತು ದೀರ್ಘವಾಗಿರುವಾಗ ಈ ಮೂವತ್ತು ಉಪವಾಸಗಳನ್ನು ಹೇಗೆ ಅನುಷ್ಠಿಸುವುದು ಎಂದು. ಬಹಳ ಕಷ್ಟವಾಗಬಹುದು ಎಂದು ಯೋಚಿಸಿರಬಹುದು. ಆದರೆ ಅಲ್ಲಾಹನು ಹೇಳಿದ ಹಾಗೆ ಎಣಿಕೆಯ ಕೆಲವು ದಿನಗಳು ದಾಟಿ ಹೋದುವು. ಇಂದು ರಮಝಾನಿನ ಕೊನೆಯ ಜುಮುಅ ಆಗಿದೆ. ಇನ್ನು ಐದು ಅಥವಾ ಕೆಲವು ಸ್ಥಳಗಳಲ್ಲಿ ಪ್ರಾಯಶಃ ನಾಲ್ಕು ಉಪವಾಸಗಳು ಬಾಕಿಯಾಗಿವೆ. ಈ ನಾಲ್ಕು, ಐದು ದಿನಗಳಲ್ಲಿ ನಮ್ಮ ಪೈಕಿ ಪ್ರತಿಯೊಬ್ಬನು ಪ್ರಯತ್ನಿಸಬೇಕಾದುದೇನೆಂದರೆ ರಮಝಾನಿನಿಂದ ಪೂರ್ಣ ಲಾಭ ಗಳಿಸಲು ನಮಗೆ ಸಾಧ್ಯವಾಗಿರದಿದ್ದರೆ ಈ ದಿನಗಳಲ್ಲಿ ಆ ಕೊರತೆಯನ್ನು ದೂರ ಸರಿಸಲು ಪ್ರಯತ್ನಿಸಬೇಕು. ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ– ಅಲ್ಲಾಹನು ನಮ್ಮನ್ನು ಕ್ಷಮಿಸಲಿ, ಅವನು ನಮ್ಮ ಮೇಲೆ ದಯೆದೋರಲಿ. ನಮ್ಮನ್ನು ರಮಝಾನಿನ ಅನುಗ್ರಹದಿಂದ ವಂಚಿತರನ್ನಾಗಿ ಮಾಡದಿರಲಿ.

ರಮಝಾನಿನ ಕೊನೆಯ ಜುಮುಅ ದಿನವಾದ ಈ ದಿನವನ್ನು ಜುಮುಅತುಲ್ ವಿದಾ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಸಾಮಾನ್ಯ ಮುಸ್ಲಿಮರು ರಮಝಾನಿನ ಈ ಕೊನೆಯ ಜುಮುಅ ದಿನದಲ್ಲಿ ಎಲ್ಲ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ ಎಂದೂ ಈ ಜುಮುಅ ನಮಾಝ್ ಅನುಷ್ಠಿಸಿದರೆ ಇಡೀ ವರ್ಷದಲ್ಲಿ ಬಿಟ್ಟು ಹೋದ ನಮಾಝ್‌ಗಳು ಜುಮುಅಗಳು ಮತ್ತು ಎಲ್ಲ ರೀತಿಯ ಆರಾಧನೆಗಳು ಈಡೇರಿಸಿದಂತಾಗುತ್ತದೆ ಎಂದು ನಂಬುತ್ತಾರೆ. ಆದರೆ ಇದು ಒಬ್ಬ ವಾಸ್ತವಿಕ ಸತ್ಯವಿಶ್ವಾಸಿಯ ಕಲ್ಪನೆಯಲ್ಲ. ಇದು ಅತ್ಯಂತ ತಪ್ಪು ಕಲ್ಪನೆಯಾಗಿದೆ. ಒಬ್ಬ ಅಹ್ಮದಿ ಮತ್ತು ನೈಜ ವಿಶ್ವಾಸಿಯ ದೃಷ್ಟಿಯಲ್ಲಿ ಇಂತಹ ಯೋಚನೆಗಳು ಧರ್ಮವನ್ನು ಅಪಹಾಸ್ಯಕ್ಕೆ ಗುರಿಪಡಿಸುವವುಗಳಾಗಿವೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಂದು ಮಜ್ಲಿಸ್‌ನಲ್ಲಿ ಈ ರೀತಿ ಪ್ರಶ್ನಿಸಲಾಗಿತ್ತು– ಮುಸ್ಲಿಮರಲ್ಲಿರುವ ಆಚಾರ ಪ್ರಕಾರ ಅವರು ಜುಮುಅತುಲ್ ವಿದಾ ದಿನದಂದು ನಾಲ್ಕು ರಕ್‌ಅತ್ ನಮಾಝ್ ಬೇರೆಯೇ ಅನುಷ್ಠಿಸುತ್ತಾರೆ. ಅದರ ಹೆಸರನ್ನು 'ಖಝಾಯೆ ಉಮರೀ' ಎಂದು ಇರಿಸಿದ್ದಾರೆ. ಅವರು ಉದ್ದೇಶಿಸುವುದೇನೆಂದರೆ ಇದರ ಮೊದಲು ಅನುಷ್ಠಿಸದೆ ಬಿಟ್ಟಿರುವ ನಮಾಝ್‌ಗಳಿಗೆ ಅದು ಪರಿಹಾರವಾಗುತ್ತದೆ ಎಂದು. ಇದಕ್ಕೆ ಏನಾದರೂ ಪುರಾವೆ ಇದೆಯೇ? ಇದರ ವಾಸ್ತವಿಕತೆ ಏನು? ಹೀಗೆ ಮಾಡುವುದು ಧರ್ಮಬದ್ಧವೇ? ಎಂದು ಕೇಳಲಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇದೊಂದು ವ್ಯರ್ಥ ಕೆಲಸವಾಗಿದೆ. ಒಬ್ಬನು ತಾನು 'ಖಝಾಯೆ ಉಮರೀ' ಅನುಷ್ಠಿಸುವೆನು ಎಂದು ಯೋಚಿಸಿ ದೈನಂದಿನ ನಮಾಝ್‌ಗಳನ್ನು ಪ್ರಜ್ಞಾಪೂರ್ವಕ ಅನುಷ್ಠಿಸದೆ ಬಿಟ್ಟು ಬಿಡುವುದಾದರೆ ಅವನು ಪಾಪಿಯಾಗಿದ್ದಾನೆ. ಆದರೆ ಒಬ್ಬನು ಹಿಂದೆ ಮಾಡಿದ ತಪ್ಪುಗಳ ಬಗ್ಗೆ ಪಶ್ಚಾತ್ತಾಪ ಪಟ್ಟು ತೌಬ ಪ್ರಾರ್ಥನೆ ಮಾಡಿ, ಇನ್ನು ಮುಂದೆ ನಮಾಝ್‌ಗಳನ್ನು ಬಿಟ್ಟು ಬಿಡಲಾರೆನು ಎಂದು ನಿರ್ಧರಿಸುವುದಾದರೆ ಅದು ತಪ್ಪಾಗದು. ನಾವು ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದ ಉತ್ತರವನ್ನೇ ನೀಡುವೆವು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರಿಗೆ ಸಂಬಂಧಿಸಿದ ಘಟನೆ ಈ ರೀತಿಯಿದೆ: ಒಮ್ಮೆ ಒಬ್ಬ ವ್ಯಕ್ತಿ ಸರಿಯಿಲ್ಲದ ಸಮಯದಲ್ಲಿ ನಮಾಝ್ ಅನುಷ್ಠಿಸುತ್ತಾ ಇದ್ದನು. ಅದು ನಮಾಝ್‌ಗೆ ನಿಗದಿತವಾದ ಸಮಯದಲ್ಲಾಗಿರಲಿಲ್ಲ. ಆಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಂದಿಗೆ ಒಬ್ಬನು ಹೇಳಿದನು: ನೀವು ಈ ಕಾಲದ ಖಲೀಫರಾಗಿದ್ದೀರಿ, ನೀವು ಅವನನ್ನು ಏಕೆ ತಡೆಯುವುದಿಲ್ಲ. ಆಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಭಯಪಡುವುದೇನೆಂದರೆ, ಪವಿತ್ರ ಖುರ್‌ಆನಿನ ವಚನ أَرَأَيْتَ الَّذِي يَنْهَى عَبْدًا إِذَا صَلَّى (ಅಲ್ಲಾಹನ) ಓರ್ವ ದಾಸನು ಪ್ರಾರ್ಥಿಸುವಾಗ ಆತನನ್ನು ತಡೆಯುವವನನ್ನು ನೀನು ಕಂಡಿದ್ದೀಯೋ (96: 10,11) ಎಂಬ ಪವಿತ್ರ ಖುರ್‌ಆನಿನ ವಚನದ ಆಪಾದನೆಗೆ ನಾನು ಗುರಿಯಾಗಿ ಬಿಡುವೆನೇ ಎಂದು ನಾನು ಭಯಪಡುತ್ತೇನೆ ಎಂದು ಹೇಳಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹಿಂದೆ ಮಾಡಿದ ತಪ್ಪುಗಳ ಬಗ್ಗೆ ಪಶ್ಚಾತ್ತಾಪಗೊಂಡು ಜುಮುಅತುಲ್ ವಿದಾದಂದು ಆ ನಮಾಝನ್ನು ಯಾರಾದರೂ ಅನುಷ್ಠಿಸುವುದಾದರೆ ಅನುಷ್ಠಿಸಲಿ ಅದನ್ನು ಏಕೆ ತಡೆಯಬೇಕು? ಹಾಗೆ ಮಾಡುವವನು ಮಾಡುವುದು ಪ್ರಾರ್ಥನೆಯನ್ನೇ ಅಲ್ಲವೇ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಜುಮುಅತುಲ್ ವಿದಾದಲ್ಲಿ ನಮಾಝ್ ಅನುಷ್ಠಿಸುವಾಗ ತಾನು ಸುಧಾರಣೆ ಹೊಂದುವ ನಿರ್ಧಾರ

ಹೊಂದದೆ ಕೇವಲ ಬಿಟ್ಟು ಹೋದ ನಮಾಝ್‌ಗಳ ಪರಿಹಾರವೆಂಬ ರೂಪದಲ್ಲಿ ಅನುಷ್ಠಿಸುವುದಾದರೆ ಅದು ಸರಿಯಾದುದಲ್ಲ. ಆದರೆ, 'ಈ ದಿನ ನಾನು ನಾಲ್ಕು ರಕಅತ್ ನಮಾಝ್ ಅನುಷ್ಠಿಸುತ್ತಿದ್ದೇನೆ. ನಾನು ತೌಬ ಮಾಡುತ್ತೇನೆ. ಇನ್ನು ಮುಂದೆ ಕ್ರಮಬದ್ಧವಾಗಿ ದೈನಂದಿನ ನಮಾಝ್ ಅನುಷ್ಠಿಸುವೆನು' ಎಂದು ಸಂಕಲ್ಪ ಮಾಡುವುದಾದರೆ ಅದು ಸರಿಯಾದುದೇ ಆಗಿದೆ. ಆದರೆ ಸುಧಾರಣೆ ಹೊಂದುವ ಸಂಕಲ್ಪವಿಲ್ಲದಿದ್ದರೆ ಅವನು ಪಾಪದೋಷಕ್ಕೆ ಪಾತ್ರನಾಗುತ್ತಾನೆ.

ಸತ್ಯ ವಿಶ್ವಾಸಿಯಾದವನು ಅಲ್ಲಾಹನು ಉಪದೇಶಿಸಿದ ಸತ್ಕರ್ಮಗಳನ್ನು ಜಾರಿಯಲ್ಲಿರಿಸುತ್ತಾನೆ. ಅವನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಭಾವನೆಗಳಿಂದ ತುಂಬಿರುತ್ತಾನೆ. ಅವನು ರಮಝಾನ್‌ನಲ್ಲಿ ಉಪವಾಸ ಅನುಷ್ಠಿಸುವುದು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರವಾಗಿದೆ. ಅವನು ಅಲ್ಲಾಹನ ಆಜ್ಞೆಯನ್ನು ಪಾಲಿಸಿ ಉಪವಾಸ ಅನುಷ್ಠಿಸಿ ರಮಝಾನ್‌ಗೆ ವಿದಾಯ ಹೇಳುವಾಗ ಅವನು ಬಹಳ ದುಃಖದಿಂದ ಹೇಳುತ್ತಾನೆ: ನಾವು ರಮಝಾನಿಗೆ ವಿದಾಯ ಹೇಳುತ್ತೇವೆ. ಆದರೆ ಆ ದಿನಗಳನ್ನು ಯಾವಾಗಲೂ ಹೃದಯದಲ್ಲಿ ನೆನಪಿನಲ್ಲಿಟ್ಟುಕೊಳ್ಳುವೆವು. ರಮಝಾನ್‌ನಲ್ಲಿ ಆರಾಧನೆಗಳ ಬಗ್ಗೆ ಹೆಚ್ಚು ಶ್ರದ್ಧೆ ಉಂಟಾಯಿತು. ಅದನ್ನು ಯಾವಾಗಲೂ ಜೀವಂತವಾಗಿರಿಸುವೆವು. ನಿನ್ನ ಸಾಮೀಪ್ಯ ಪಡೆಯುವ ಪ್ರಯತ್ನವನ್ನು ನಾವು ಮುಂದುವರಿಸುವೆವು. ನಾವು ನಿನ್ನ ಪ್ರೀತಿಯ ಅದ್ಭುತ ದೃಶ್ಯಗಳನ್ನು ಕಂಡೆವು. ನಾವು ನಡೆಯುತ್ತಾ ನಿನ್ನ ಸಮೀಪಕ್ಕೆ ಬರಲು ಪ್ರಯತ್ನಿಸುವಾಗ ನೀನು ನಿನ್ನ ವಾಗ್ದಾನ ಪ್ರಕಾರ ಓಡಿಕೊಂಡು ನಮ್ಮ ಸಮೀಪಕ್ಕೆ ಬರುತ್ತಿರುವುದನ್ನು ನಾವು ಕಂಡೆವು. ನಾವು ನಮ್ಮ ಲೌಕಿಕ ಸಂಬಂಧಿಕರನ್ನು ನೆನಪಿಸುತ್ತಾ ಇರುವಾಗ ಎಲ್ಲರಿಗಿಂತಲೂ ಹೆಚ್ಚಾಗಿ ನಮ್ಮನ್ನು ಪ್ರೀತಿಸುವವನನ್ನು ಹೇಗೆ ತಾನೆ ನಾವು ಮರೆತು ಬಿಡುವೆವು. ಅವನ ಔದಾರ್ಯಗಳನ್ನು ಹೇಗೆ ತಾನೆ ಮರೆತು ಬಿಡುವೆವು.

ಅಲ್ಲಾಹನು ಔದಾರ್ಯ ತೋರಿಸುವ ರೀತಿಯೇ ಅದ್ಭುತಕರವಾಗಿದೆ. ಜುಮುಅತುಲ್ ವಿದಾದ ದಿನ ಸಿಗುವಂತಹ ಅಥವಾ ಸಿಗಬಹುದಾದ ಅನುಗ್ರಹಗಳು ದೊರಕುವಂತಹ ದಿನವನ್ನು ಪ್ರತಿ ವಾರದಲ್ಲಿಯೂ ಇಟ್ಟಿದ್ದಾನೆ. ಅದು ಜುಮುಅ ದಿನವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಜುಮುಅದ ದಿನ ಒಂದು ನಿರ್ದಿಷ್ಟ ಕಾಲವಿರುತ್ತದೆ. ಆಗ ಒಬ್ಬ ಮುಸ್ಲಿಮ್ ನಮಾಝ್ ಅನುಷ್ಠಿಸುವಾಗ ಅವನು ಬೇಡಿಕೊಳ್ಳುವ ಪ್ರಾರ್ಥನೆಗಳು ಅಲ್ಲಿಯೇ ಅಂಗೀಕಾರ ಪಡೆಯುತ್ತವೆ. ಆದರೆ ಈ ನಿರ್ದಿಷ್ಟ ಕಾಲವಧಿ ಬಹಳ ಕಡಿಮೆ ಸಮಯದ್ದಾಗಿರುತ್ತದೆ ಎಂದು ಸಹ ಪೈಗಂಬರರು ಹೇಳಿದ್ದಾರೆ. ನಾವು ಇನ್ನು ಮುಂದೆ ಅಲ್ಲಾಹನ ಸಾಮೀಪ್ಯದ ಕಾಲಗಳಿಂದ ದೂರ ಸರಿಯುವುದಿಲ್ಲ. ಈ ಸಮಯ ನಮಗೆ ಏಳು ದಿನಗಳ ನಂತರ ಪುನಃ ದೊರಕಲಿದೆ. ಯಾರಾದರೂ ಈ ಸತ್ಕರ್ಮಗಳಿಂದ ಮತ್ತು ಅಲ್ಲಾಹನ ಸಾಮೀಪ್ಯದ ಸಮಯಗಳಿಗೆ ವಿದಾಯ ಹೇಳಲು ಬಯಸುವುದಾದರೆ ಅವನು ಸತ್ಯ ವಿಶ್ವಾಸಿ ಆಗಿರಲಾರ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಅಲ್ಲಾಹನ ಸಾಮೀಪ್ಯ ಬೇಗನೆ ಸಿಗಲು ಮತ್ತು ಅವನ ಸಂಪ್ರೀತಿ ಬೇಗನೆ ಗಳಿಸಲು ನಮಗೆ ಉಪದೇಶಿಸಿದ ವಿಧಾನಗಳೇನೆಂದರೆ, ದಿನಂಪ್ರತಿ ಐದು ಹೊತ್ತಿನ ನಮಾಝ್ ಅನುಷ್ಠಾನ, ಜುಮುಅದಿಂದ ಮುಂದಿನ ಜುಮುಅದ ತನಕ, ಮತ್ತು ರಮಝಾನ್ ಉಪವಾಸ ಅನುಷ್ಠಾನ ಮುಂದಿನ ರಮಝಾನಿನ ಉಪವಾಸದ ತನಕ ಅವುಗಳ ಮಧ್ಯೆ ಸಂಭವಿಸುವ ಪಾಪಗಳಿಗೆ ಪರಿಹಾರವಾಗುತ್ತದೆ ಎಂದು. ಆದರೆ ಶರತ್ತೇನೆಂದರೆ ದೊಡ್ಡ ದೊಡ್ಡ ಪಾಪಕೃತ್ಯಗಳಿಂದ ತನ್ನನ್ನು ಸತ್ಯವಿಶ್ವಾಸಿ ರಕ್ಷಿಸುತ್ತಾ ಇರಬೇಕು.

ನಾನು ಪಠಿಸಿದ ಪವಿತ್ರ ಖುರ್‌ಆನಿನ ವಚನಗಳಲ್ಲಿ ಅಲ್ಲಾಹನು ಜುಮುಅ ದಿವಸದ ಮಹತ್ವದ ಬಗ್ಗೆ ಹೇಳಿರುವನು. ಜುಮುಅದಲ್ಲಿ ಬಂದು ಸೇರುವ ಬಗ್ಗೆ ವಿಶಿಷ್ಟವಾಗಿ ಹೇಳಿದ್ದಾನೆ. ಜುಮುಅದ ಅಝಾನ್ ಕೇಳಿದ ಕೂಡಲೆ ಎಲ್ಲ ಕೆಲಸಗಳನ್ನು ನಿಲ್ಲಿಸಿ ಜುಮುಅದಲ್ಲಿ ಸೇರಲು ಆಗಮಿಸಬೇಕೆಂದು ಅಲ್ಲಾಹನು ಆಜ್ಞಾಪಿಸಿದ್ದಾನೆ. ಖುತ್‌ಬ ಸಹ ಜುಮುಅ ನಮಾಝಿನ ಭಾಗವಾಗಿದೆ. ಆದುದರಿಂದ ಸೋಮಾರಿತನದಿಂದ ವರ್ತಿಸಿ ನಮಾಝ್ ಪ್ರಾರಂಭವಾಗುವಾಗ ತಲುಪಿದರೆ ಸಾಕು ಎಂದು ಯೋಚಿಸಬೇಡಿರಿ. ಖುತ್‌ಬ ಆಲಿಸಲು ಆಗಮಿಸುವುದು ಆವಶ್ಯಕವಾಗಿದೆ. ಈ ಕಾಲದಲ್ಲಿ ಅಲ್ಲಾಹನು ನಮಗೆ ಎಂ.ಟಿ.ಎ. ದ ಅನುಕೂಲತೆ ಒದಗಿಸಿದ್ದಾನೆ. ಯುರೋಪು ಮತ್ತು ಆಫ್ರಿಕದ ಕೆಲವು ದೇಶಗಳಲ್ಲಿ ಜುಮುಅದ ಸಮಯ ಒಂದೇ ಆಗಿದೆ. ಆಗ ಖಲೀಫರ ಖುತ್‌ಬ ಆಲಿಸಬೇಕು. ಸಮಯ ವ್ಯತ್ಯಾಸವಿರುವಲ್ಲಿ ಸಹ ಅಹ್ಮದಿಯರು ಖುತ್‌ಬ ಆಲಿಸಬೇಕು. ಲೈವ್ ಖುತ್‌ಬ ಆಲಿಸಲು ಸಾಧ್ಯವಿಲ್ಲವಾದರೆ ರಿಕೋರ್ಡ್ ಆಗಿರುವುದನ್ನು ಆಲಿಸಿರಿ. ಖುತ್‌ಬದ ದೀರ್ಘ ಉಲ್ಲೇಖಗಳನ್ನು ಜಮಾಅತ್‌ಗಳಲ್ಲಿ ಖುತ್‌ಬ ನೀಡುವವರು, ಖುತ್‌ಬ ನೀಡುವ ಮುಬಲ್ಲಿಗರು ತಮ್ಮ ಜಮಾಅತ್‌ಗಳಿಗೆ ಅದೇ ದಿನ, ಅಥವಾ ಮರುದಿನ ಅಥವಾ ಮುಂದಿನ ವಾರ ಓದಿ ಹೇಳಬೇಕು. ಜಮಾಅತಿನಲ್ಲಿ ಏಕತೆ ಸೃಷ್ಟಿಸಲು ಇದು ಬಹಳ ದೊಡ್ಡ ಮಾರ್ಗವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲಘಟ್ಟಕ್ಕೆ ಜುಮುಅದೊಂದಿಗೆ ವಿಶಿಷ್ಟ ಸಂಬಂಧವಿದೆ. ಅಲ್ಲಾಹನು ಈ ಆವಿಷ್ಕಾರದ ಮೂಲಕ ಆಯಾಕಾಲದ ಖಲೀಫರ ಖುತ್‌ಬವನ್ನೂ ಸಹ ಇದರ ಒಂದು ಭಾಗವನ್ನಾಗಿ ಮಾಡಿರುವನು. ಅಲ್ಲಾಹನು ಹಿಂಗೆ ಸಹ ಹೇಳಿದ್ದಾನೆ: ನಿಮ್ಮ ವ್ಯಾಪಾರ ಮತ್ತು ಆಟ ವಿನೋದಗಳು ನಿಮ್ಮನ್ನು ಜುಮುಅದಿಂದ ತಡೆಯಬಾರದು. ವಿಶಿಷ್ಟವಾಗಿ ಈ ಕಾಲಘಟ್ಟದಲ್ಲಿ ವ್ಯಾಪಾರಗಳು ಅಂತರ್ರಾಷ್ಟ್ರೀಯ ಮಟ್ಟದಲ್ಲಿರುತ್ತವೆ. ಆದುದರಿಂದ ಅವು ನಿಮ್ಮನ್ನು ಅದರಲ್ಲಿ ಹೆಚ್ಚು ತಲ್ಲೀನರನ್ನಾಗಿ ಮಾಡುತ್ತವೆ. ನಿಮ್ಮ ಆಟ ವಿನೋದಗಳು ಸಹ ಹಾಗೆಯೇ ಇವೆ. ಆದುದರಿಂದ ಸಮಯದ ಮಿತಿ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿಯೂ ಸತ್ಯವಿಶ್ವಾಸಿ ಜುಮುಅದ ಮಹತ್ವವನ್ನು ಮನಗಾಣಬೇಕಾಗಿದೆ. ಯಾಕೆಂದರೆ ಅಲ್ಲಾಹನ ಸಂಪ್ರೀತಿ ಗಳಿಸುವುದೇ ಸತ್ಯವಿಶ್ವಾಸಿಯ ಆದ್ಯತೆಯಾಗಿದೆ. ಸತ್ಯವಿಶ್ವಾಸಿ ಆದ್ಯತೆ ನೀಡಬೇಕಾಗಿರುವುದು ಇದಕ್ಕೇ ಆಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬ (ಶಿಷ್ಯರು) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಿವ್ಯಶಕ್ತಿಯ ಮೂಲಕ ಪರಿಪೂರ್ಣವಾಗಿ ಪರಿಶುದ್ಧರಾಗಿದ್ದರು. ಅಲ್ಲಾಹನ ಸಂಪ್ರೀತಿ ಗಳಿಸುವುದೇ ಅವರ ಎಲ್ಲದಕ್ಕಿಂತಲೂ ಹೆಚ್ಚಿನ ಆದ್ಯತೆಯಾಗಿತ್ತು. ಅಂತಹ ಜನರು ವ್ಯಾಪಾರ ಅಥವಾ ಆಟ ವಿನೋದಕ್ಕೋಸ್ಕರ ಜುಮುಅವನ್ನು ಬಿಟ್ಟು ಬಿಡುತ್ತಿದ್ದರೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ನಮ್ಮ ಕಾಲಘಟ್ಟದ ಚಿತ್ರವನ್ನೇ ಪವಿತ್ರ ಖುರ್‌ಆನಿನ ನಾನು ಪಠಿಸಿದ ವಚನಗಳಲ್ಲಿ ನೀಡಲಾಗಿದೆ ಎಂದು ತಿಳಿಯಬೇಕಾಗಿದೆ. ಈ ವಚನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲಘಟ್ಟವನ್ನೇ ಚಿತ್ರಿಸುತ್ತದೆ. ಅದು ಧರ್ಮಕ್ಕೆ ಆದ್ಯತೆ ನೀಡುವುದರಿಂದ ಹಿಂದೆ ಸರಿಯುವ, ಲೌಕಿಕ ಕಾರ್ಯಗಳಿಗೆ ಆದ್ಯತೆ ನೀಡುವ ಕಾಲವಾಗಿರುವುದು. ಇಪ್ಪತ್ತನಾಲ್ಕು ಗಂಟೆಗಳಲ್ಲೂ ವ್ಯಾಪಾರಗಳಲ್ಲಿ ಮತ್ತು ಆಟ ವಿನೋದಗಳಲ್ಲಿ ಮಗ್ನರಾಗುವ ಕಾಲಘಟ್ಟ ಇದಾಗಿದೆ. ಲೋಕದ ದೂರಗಳು ಕಡಿಮೆ ಆಗುತ್ತಿವೆ. ಸಾಮೂಹಿಕ ಜಾಲತಾಣಗಳ ಮೂಲಕ ಮನೆಯಲ್ಲಿ ಕುಳಿತುಕೊಂಡೇ ಲೋಕದ ವಿವಿಧ ಸ್ಥಳಗಳಲ್ಲಿ ನಡೆಯುವ ಆಟೋಟಗಳನ್ನೂ ವಿನೋದ ಕಾರ್ಯಕ್ರಮಗಳನ್ನೂ ಕಾಣಬಹುದಾಗಿದೆ. ಅಲ್ಲಾಹನು ಹೇಳುತ್ತಾನೆ: ಅಂತಹ ಕಾಲಘಟ್ಟದಲ್ಲಿ ನೀವು ನಿಮ್ಮ ಆದ್ಯತೆಗಳನ್ನು ಸರಿಯಾಗಿ ಇಡುವುದಾದರೆ ನೀವು ಅಲ್ಲಾಹನ ಅನುಗ್ರಹ ಗಳಿಸುವವರಾಗುವಿರಿ. ಒಂದು ಸಂದರ್ಭದಲ್ಲಿ

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಜುಮುಅ ನಮಾಝ್‌ಗೆ ಬನ್ನಿರಿ ಮತ್ತು ಇಮಾಮರ ಸಮೀಪ ಕುಳಿತುಕೊಳ್ಳಿರಿ. ಒಬ್ಬನು ಜುಮುಅದಿಂದ ಹಿಂದೆ ಸರಿಯುತ್ತಾ ಕೊನೆಗೆ ಸ್ವರ್ಗದಲ್ಲಿಯೂ ಹಿಂದೆ ಸರಿದು ಬಿಡುತ್ತಾನೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 1895–96ರಲ್ಲಿ ಸರಕಾರಕ್ಕೆ ಒಂದು ನಿವೇದನೆ ಅರ್ಪಿಸಲು ನಿರ್ಧರಿಸಿ ಜನರಿಂದ ಸಹಿ ಪಡೆಯಲು ಪ್ರಾರಂಭಿಸಿದ್ದರು. ಸರಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ಮುಸ್ಲಿಮ್ ಉದ್ಯೋಗಿಗಳಿಗೆ ಜುಮುಅ ನಮಾಝ್‌ನಲ್ಲಿ ಸೇರಲು ಎರಡು ಗಂಟೆಗಳ ಬಿಡುವು ಕೊಡಬೇಕೆಂದು ನಿವೇದನೆ ಸಲ್ಲಿಸಲು ನಿರ್ಧರಿಸಲಾಗಿತ್ತು. ಈ ಸಂದರ್ಭದಲ್ಲಿ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಒಂದು ಕರಪತ್ರ ಪ್ರಕಟಿಸಿ ಈ ಕೆಲಸ ಒಳ್ಳೆಯದೇ ಆಗಿದೆ. ಆದರೆ ಮಿರ್ಝಾ ಸಾಹೇಬರ ಮೂಲಕ ಈ ಕೆಲಸ ನಡೆಯಬಾರದು. ನಾವು ಸ್ವತಃ ಈ ಕೆಲಸ ಮಾಡುವೆವು ಎಂದು ಹೇಳಿದರು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ನಮಗೆ ಹೆಸರು ಗಳಿಸುವ ಆಶೆ ಇಲ್ಲ. ನೀವೇ ಈ ಕೆಲಸ ಮಾಡಿಕೊಳ್ಳಿರಿ' ಹಾಗೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಪ್ರಯತ್ನ ನಿಲ್ಲಿಸಿದರು. ಆದರೆ ಆ ಕೆಲಸ ಮುಂದುವರಿಯಲಿಲ್ಲ.

ಹೀಗಿದ್ದರೂ ಒಮ್ಮೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಂದಿನ ವೈಸ್‌ರಾಯಿಯಾಗಿದ್ದ ಲಾರ್ಡ್ ಕರ್ಝನ್‌ರಿಗೆ ಒಂದು ಜ್ಞಾಪಕ ಪತ್ರ ಅರ್ಪಿಸಿದರು. ಅದರಲ್ಲಿ ಲಾರ್ಡ್ ಕರ್ಝನ್ ಮುಸ್ಲಿಮರ ಹಕ್ಕುಗಳನ್ನು ಈಡೇರಿಸಿಕೊಟ್ಟ ಬಗ್ಗೆ ಕೃತಜ್ಞತೆ ಅರ್ಪಿಸಿ ಹೀಗೆ ಬರೆದರು– ಮುಸ್ಲಿಮರ ಒಂದು ಆಶೆ ಈಡೇರದೆ ಬಾಕಿಯಾಗಿ ಉಳಿದಿದೆ. ಮುಸ್ಲಿಮರಿಗೆ ಮಸ್‌ಜಿದ್‌ಗಳನ್ನು ಮರಳಿ ದೊರಕುವಂತೆ ಮಾಡಿದ ಕೈಗಳಿಂದಲೇ ಈ ಕೆಲಸ ಸಹ ಈಡೇರುವಂತೆ ಆಗಲಿ ಎಂಬ ಆಶೆ ಇದೆ. ಶುಕ್ರವಾರ ಮುಸ್ಲಿಮರ ಹಬ್ಬದ ದಿನವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅದರ ಪ್ರಸ್ತಾಪವಿದೆ. ಈ ದೇಶದಲ್ಲಿ ಮೂರು ಕೋಮುಗಳು ಇವೆ. ಹಿಂದೂ, ಮುಸ್ಲಿಮ್ ಮತ್ತು ಕ್ರೈಸ್ತರು. ಹಿಂದುಗಳಿಗೆ ಮತ್ತು ಕ್ರೈಸ್ತರಿಗೆ ಅವರ ಧಾರ್ಮಿಕ ಆಚರಣೆಗಳ ಆದಿತ್ಯವಾರದ ದಿನ ರಜಾದಿನವಾಗಿ ನೀಡಲಾಗಿದೆ. ಆದರೆ ಮುಸ್ಲಿಮರ ರಜಾದಿನವಾದ ಶುಕ್ರವಾರ ರಜೆ ಇಲ್ಲ. ಮುಸ್ಲಿಮರಿಗೆ ಜುಮುಅದ ದಿನ ರಜಾದಿನವಾಗಿ ನೀಡಿದರೆ ಅದು ಎಂತಹ ಉಪಕಾರವಾಗುವುದೆಂದರೆ ಸುವರ್ಣ ಲಿಪಿಗಳಲ್ಲಿ ಬರೆಯುವುದಕ್ಕೆ ಅರ್ಹವಾಗುವುದು.

ಇಂದು ಮುಸ್ಲಿಮ್ ನಾಮಧಾರಿಗಳಾದ ಮತಪಂಡಿತರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಆಂಗ್ಲೇಯರು ನೆಟ್ಟ ಗಿಡವೆಂದು ಆಕ್ಷೇಪಿಸುತ್ತಾರೆ. ಆದರೆ ಮುಸ್ಲಿಮರ ಧಾರ್ಮಿಕ ಹಕ್ಕುಗಳ ಬಗ್ಗೆ ಆಂಗ್ಲೇಯ ಸರಕಾರದ ಗಮನ ಹರಿಯಿಸಿದವರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಆಗಿದ್ದರು. ಬೇರೆ ಯಾವ ಮುಸ್ಲಿಮ್ ನಾಯಕನಿಗೂ ಈ ಭಾಗ್ಯ ದೊರಕಲಿಲ್ಲ. ಅದು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಮಾಡಬೇಕಾದ ಕೆಲಸವಾಗಿತ್ತು. ಏಕೆಂದರೆ ಈ ಕಾಲದಲ್ಲಿ ಇಸ್ಲಾಮಿನ ಮಹತ್ವ ಲೋಕಕ್ಕೆ ಸ್ಪಷ್ಟಪಡಿಸಿಕೊಡುವ ಕೆಲಸ ಮತ್ತು ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ಕೃತಿರೂಪಕ್ಕೆ ತರುವುದು ಅವರ ಮೂಲಕವೇ ಆಗಬೇಕಾಗಿತ್ತು. ಅದು ಅವರಿಗೆ ವಹಿಸಿಕೊಡಲಾದ ಕೆಲಸವಾಗಿತ್ತು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರೆಂದು ವಾದಿಸುವ ನಮ್ಮ ಪ್ರತಿಯೊಂದು ಕೆಲಸ ಮತ್ತು ಮಾತು ಇಸ್ಲಾಮಿನ ಉಪದೇಶಗಳ ವಾಸ್ತವಿಕತೆಯನ್ನು ಪ್ರಕಟಿಸುವಂತಿರಬೇಕು. ನಾವು ಹೀಗೆ ಪ್ರತಿಜ್ಞೆ ಮಾಡಬೇಕು– ಈ ರಮಝಾನ್ ಯಾವುದೆಲ್ಲಾ ಅನುಗ್ರಹಗಳನ್ನು ತಂದಿತೋ ಮತ್ತು ಯಾವ ಅನುಗ್ರಹಗಳನ್ನು ಅದು ನಮ್ಮಲ್ಲಿ ಬಿಟ್ಟು ಹೋಗುತ್ತಿದೆಯೋ ನಾವು ಅವುಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡುವೆವು ಎಂದು – ಇನ್‌ಶಾಅಲ್ಲಾಹ್. ನಾವು ಇಸ್ಲಾಮಿನ ಪ್ರಾಯೋಗಿಕ ಚಿತ್ರವನ್ನು ಕೇವಲ ಒಂದು ತಿಂಗಳು ಮಾತ್ರ ಪ್ರಕಟಿಸಿದರೆ ಸಾಲದು ಅದನ್ನು ಸ್ಥಿರವಾಗಿ ಪ್ರಕಟಿಸಿ ಈ ಕಾಲಘಟ್ಟದ ಇಮಾಮರೊಂದಿಗೆ ಮಾಡಿದ ಪ್ರತಿಜ್ಞೆ ಈಡೇರಿಸಿ ಕೊಡಬೇಕಾಗಿದೆ.

ನಾವು ಈ ದಿನ ಪ್ರತಿಜ್ಞೆ ಮಾಡುವ. ನಾವು ಬೈಅತ್‌ನ ಪ್ರತಿಜ್ಞೆಗಳನ್ನು ಈಡೇರಿಸುವೆವು ಎಂದು. ಒಬ್ಬ ಸತ್ಯವಿಶ್ವಾಸಿಯ ಬಗ್ಗೆ ಪ್ರತೀಕ್ಷಿಸುವ ಹಾಗೆ ನಾವು ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸುವೆವು ಎಂದು. ಅಲ್ಲಾಹನು ಆಜ್ಞಾಪಿಸಿದ ಹಾಗೆ ಮತ್ತು ಅದನ್ನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಹಾಗೆ ನಾವು ರಮಝಾನಿನ ಅನುಗ್ರಹಗಳನ್ನು ನಮ್ಮ ಜೀವಿತದ ಭಾಗವನ್ನಾಗಿ ಮಾಡುವೆವು ಎಂದು — ಇನ್‌ಶಾಅಲ್ಲಾಹ್. ಅಲ್ಲಾಹನು ನಮಗೆ ಈ ಭಾಗ್ಯ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 01-07-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon